# ಹಳೇ ಮತ್ತು ಹೊಸ ಒಡಂಬಡಿಕೆಯಗಳ ಮಧ್ಯದಲ್ಲಿ ವಿರಾಮ

## I. ಪರಿಚಯಾತ್ಮಕ – ಐತಿಹಾಸಿಕ ದೊಡ್ಡ ಬಿರುಕು – ಮಾಹಿತಿಯ ಮೂಲಗಳು.

ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿ ನಾಲ್ಕುನೂರು ವರ್ಷಗಳ ಐತಿಹಾಸಿಕ ಅಂತರವಿರುತ್ತದೆ. ಆ ಶತಮಾನಗಳಲ್ಲಿ ಗ್ರೀಸ್ ತನ್ನ ಸಾಹಿತ್ಯದ ಮತ್ತು ಕಲೆಯ ಶ್ರೇಷ್ಠ ಕೃತಿಗಳನ್ನು ಉತ್ಪಾದಿಸಿತು; ಅಲೆಕ್ಸಾಂಡರನು ಗ್ರೀಕ್ ಸೈನ್ಯಗಳ ಬಲವನ್ನು, ಮತ್ತು ಹೆಚ್ಚು ಲಾಭದಾಯಕವಾದ ಗ್ರೀಕ್ ಕಲೆಯ ಬಲವನ್ನು ಪಶ್ಚಿಮ ಏಶಿಯಾದ ಎಲ್ಲಾ ಕಡೆಗಳಲ್ಲಿ ಒಯ್ದನು; ರೋಮ ಪಟ್ಟಣವು ತಿಬೆರಿಯದ ಮೇಲಿನ ಗಡಿ ಪಟ್ಟಣದಿಂದ ವಿಶಾಲವಾದ "ಮೊನಾರ್ಕಿ ಆಫ್ ದ ಮೆಡಿಟೆರ್ರಾನಿಯನ್" ಆಗಿ ಬೆಳೆಯಿತು. ಅರುಹು ಇಲ್ಲದೆ ರೋಮನ್ ರೋಡುಗಳ, ರೋಮನ್ ನಿಯಮಗಳ, ರೋಮನ್ *ಸಂಸ್ಕೃತಿಯ* ತನ್ನ ವಿಶಾಲವಾದ ವಿಸ್ತರಣೆಯೊಂದಿಗೆ ನೀತಿಯ ದೇವರ ರಾಜ್ಯದ ಇನ್ನೂ ವಿಶಾಲವಾದ ವಿಸ್ತರಣೆಗಾಗಿ ಅಗಲವಾದ ಮಾರ್ಗವನ್ನು ಸಿದ್ಧಪಡಿಸುತ್ತಿತ್ತು. ಈ ಶತಮಾನಗಳಲ್ಲಿ ಇಬ್ರೀಯ ಪ್ರವಾದಿಗಳ ಧ್ವನಿಯೂ ಮತ್ತು ಪ್ರೇರೇಪಿತ ಇತಿಹಾಸಕಾರನ ಲೇಖನಿ ಒಂದೇ ರೀತಿಯಲ್ಲಿ ಮೌನವಾಗಿದ್ದವು. ಯೆಹೂದಿ ವ್ಯವಹಾರಗಳ ಬಗ್ಗೆ ನಮ್ಮ ಜ್ಞಾನಕ್ಕಾಗಿ ನಾವು ಮೂರು ಮುಖ್ಯ ಮೂಲಗಳನ್ನು ಅವಲಂಬಿಸುತ್ತೇವೆ, ಅವು ಹೀಗಿವೆ.:

**1. ಹಳೇ ಒಡಂಬಡಿಕೆಯ ಅಪೊಕ್ರಿಫ.**-ಇವು ಈ ಅವಧಿಯ ಯೆಹೂದಿ ಬರಹಗಳು, ಒಂದು ರೀತಿಯ ಹಳೇ ಒಡಂಬಡಿಕೆಗೆ ಪ್ರೇರೇಪಿತವಲ್ಲದ ಅನುಬಂಧವಾಗಿದೆ. ಸಮಯದ ಇತಿಹಾಸದ ಮೇಲೆ ಅವು ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ, ಆದರೆ ಅಂಗೀಕೃತ ಪುಸ್ತಕಗಳಿಗಿಂತ ಎಷ್ಟೋ ಕೆಳಗೆ ಬೀಳುತ್ತವೆ. ಐಗುಪ್ತದ ಸ್ಮಾರಕಗಳು, ಬಬಿಲೋನಿನ ಬರಹಗಳಿದ್ದ ಇಟ್ಟಿಗೆಗಳು, ನಿನೆವೆಯ ಮಣ್ಣಿನ ಹಲಿಗೆಗಳು, ಮತ್ತು ಇತರ ವಿಫುಲವಾದ ಸಂಶೋಧನೆಗಳು ಪರಿಶುದ್ಧ ಬರಹದ ದಾಖಲೆಗಳ ಐತಿಹಾಸಿಕ ಸರಿಯಾಗಿರುವಿಕೆಯನ್ನು ಹೆಚ್ಚೆಚ್ಚಾಗಿ ದೃಢಪಡಿಸುವಾಗ, ಅಪೊಕ್ರಿಫಲ್ ಬರಹಗಳು ಗಣನಾದೋಷಗಳಿಂದ ಮತ್ತು ಇತರ ಐತಿಹಾಸಿಕ ಹಾಗೂ ಭೌಗೋಳಿಕ ತಪ್ಪುಗಳಿಂದ ತುಂಬಿಕೊಂಡಿರುವವೆಂದು ರುಜುವಾತು ಪಡಿಸಲ್ಪಟ್ಟಿದೆ, ಮಕ್ಕಬ್ಬಿಯರ ಮೊದಲನೆ ಪುಸ್ತಕವು ಐತಿಹಾಸಿಕವಾಗಿ ಅತೀ ಬೆಲೆಯುಳ್ಳ ಸಂಗ್ರಹವಾಗಿದೆ.

**2. ಜೋಸಿಫಸ್‌ನ ಬರಹಗಳು.**-ಜೋಸಿಫಸನು ಕ್ರಿ.ಶ. 37ರಲ್ಲಿ ಜನಿಸಿದ ಯೆಹೂದಿ ಇತಿಹಾಸಕಾರನು. ಟೈಟಸನಿಂದ ಯೆರೂಸಲೇಮಿನ ಮುತ್ತಿಗೆ ಹಾಗೂ ನಾಶನದಲ್ಲಿ ಅವನು ಉಳಿದುಕೊಂಡನು ಮತ್ತು ಎರಡು ಮಹತ್ವದ ಕೃತಿಗಳನ್ನು ಬರೆದನು: "ದ ಆಂಟಿಕ್ವಿಟೀಜ್ ಆಫ್ ದ ಜ್ಯೂಶ್," ಸೃಷ್ಟಿಯಿಂದ ಸಂಪೂರ್ಣ ಚರಿತ್ರೆ ಮತ್ತು "ದ ಜ್ಯೂಯಿಶ್ ವಾರ್ಸ್," ಇದು ಕ್ರಿ.ಪೂ. 170ರಿಂದ ಅವನ ಸ್ವಂತ ಸಮಯದವರೆಗೆ ಅವನ ಸ್ವಂತ ಜನರ ವೃತ್ತಾಂತವನ್ನು ಕೊಡುತ್ತದೆ.

**3. ಗ್ರೀಕ್ ಮತ್ತು ರೋಮನ್ ಬರಹಗಾರರು.**

## II. ರಾಜಕೀಯ

## ಅವಧಿಗಳು.

ರಾಜಕೀಯ ಚರಿತ್ರೆಯು ಆರು ಅವಧಿಗಳನ್ನು ಒಳಗೊಂಡಿರುತ್ತವೆ: (1) ಪರ್ಷಿಯನ್ನರು; (2) ಮಕೆದೋನಿಯರು; (3) ಐಗುಪ್ತ್ಯರು; (4) ಸಿರಿಯನ್ನರು; (5) ಮಕ್ಕಬ್ಬಿಯರು ಇಲ್ಲವೇ ಸ್ವತಂತ್ರರು; (6) ರೋಮನರು.

**1. ಪರ್ಷಿಯನ್ ಅವಧಿ** (ಕ್ರಿ.ಪೂ. 538-332).-ಈ ಅವಧಿಯು ದೊಡ್ಡ ಕೋರೋಷಿನಿಂದ ಬಬಿಲೋನು ವಶಪಡಿಸಿಕೊಳ್ಳಲ್ಪಡುವುದರಿಂದ ಮತ್ತು ಅದರ ಪರಿಣಾಮವಾಗಿ ಪರ್ಷಿಯನ್ ಬಲದೊಂದಿಗೆ ಯೆಹೂದ್ಯರ ನಿಷ್ಠೆಯು ಜಯದ ವರ್ಗಾವಣೆಯಾಗುವದರೊಂದಿಗೆ ಪ್ರಾರಂಭವಾಗುತ್ತದೆ. ಆದುದರಿಂದ, ಅವಧಿಯ ಹೆಚ್ಚಾದ ಭಾಗವು ಹಳೇ ಒಡಂಬಡಕೆಯ ಚರಿತ್ರೆಯ ಸೆರೆಯ ಅನಂತರದ ಅವಧಿಯಿಂದ ತುಂಬಿರುತ್ತದೆ. ಪರ್ಷಿಯನ್ನರ ಅಧೀನತೆಯಲ್ಲಿ ಯೆಹೂದ್ಯರು ಸಾಮಾನ್ಯವಾಗಿ ಅವರ ಸ್ವಂತ ಮಹಾಯಾಜಕನಿಂದ, ಸಿರಿಯನ್ ಸತ್ರಾಪನಿಗೆ ಇಲ್ಲವೇ ರಾಜ್ಯಪಾಲನಿಗೆ ಅಧೀನನಾಗಿ ನಡಿಸಲ್ಪಡುತ್ತಿದ್ದರು. ಮುಖ್ಯವಾಗಿ, ಪರ್ಷಿಯನ್ ಆಳ್ವಿಕೆಯು ಕಠಿಣವಾದದ್ದಾಗಿರಲಿಲ್ಲ. ಸಮಾರ್ಯದವರೊಂದಿಗೆ ತೊಂದರೆಗಳು ಮುಂದುವರಿದವು. ಇವರು ಹತ್ತು ಕುಲಗಳಲ್ಲಿ ಉಳಿದುಕೊಂಡಿದ್ದವರು ಆಮದು ಮಾಡಿಕೊಂಡ ಅಸ್ಸೀರಯನ್ನರೊಂದಿಗೆ ಒಂದುಗೂಡಿದವರು ಎಂಬುದು ಜ್ಞಾಪಿಸಲ್ಪಡುತ್ತದೆ. ಅವರು ಬಹಳ ಸಲ ವಿಶ್ವಾಸಘಾತಕ ಯೆಹೂದ್ಯರಿಂದ ಹೆಚ್ಚಿಸಲ್ಪಡುತ್ತಿದ್ದರು. ಅವರಲ್ಲಿ ಒಬ್ಬನು, ಮಾನಾಸ್ಸೆ ಎಂಬ ಹೆಸರಿನ ಯಾಜಕನು, ಸುಮಾರು ಕ್ರಿ.ಪೂ. 400ರಲ್ಲಿ ಗೆರಿಜಿಮ್ ಬೆಟ್ಟದ ಮೇಲೆ ಒಂದು ಆಲಯವನ್ನು ಕಟ್ಟಿದನು (ಹೋಲಿಸು ಯೋಹಾನ 4:20) ಸಮಾರ್ಯದವರು ಪಂಚಗ್ರಂಥವನ್ನು ಹೊಂದಿಕೊಂಡಿದ್ದರು, ದೇವರಲ್ಲಿ ನಂಬಿಕೆಯನ್ನಿಟ್ಟಿದ್ದರು, ಯಜ್ಞಗಳನ್ನು ಅರ್ಪಿಸುತ್ತಿದ್ದರು ಮತ್ತು ಮೆಸ್ಸೀಯನಿಗಾಗಿ ಮುನ್ನೋಡಿದರು, ಅವರ ಧರ್ಮವು ಭ್ರಷ್ಟ ಯೂದಾಯತ್ವ ಎಂದು ವಿವರಿಸಲ್ಪಡ ಬಹುದು.

**2. ಮಕೆದೋನಿಯನ್ ಅವಧಿ** (ಕ್ರಿ.ಪೂ. 332-323).-334ರ ಬೇಸಿಗೆ ಕಾಲದಲ್ಲಿ, ಅಲೆಕ್ಸಾಂಡರನು ತನ್ನ ಜಯಗಳ ಸರಿಸಮಾನತೆಯಿಲ್ಲದ ಸರಣಿಗಳೊಂದಿಗೆ ಏಶಿಯಾದೊಳಗೆ ದಾವೀದನು, ಗ್ರಾನಿಕಸ್ ಮತ್ತು ಇಸ್ಸೂಸಗಳಲ್ಲಿ ಡೆರಿಯಸ್‌ನನ್ನು ಸೋಲಿಸಿದ ನಂತರ ಮತ್ತು ಏಳು ತಿಂಗಳ ಬಲವಾದ ಎದುರಿಸುವಿಕೆಯ ನಂತರ ತೂರನ್ನು ವಶಪಡಿಸಿಕೊಂಡನಂತರ, ಅವನು ಪಾಲೆಸ್ತೀನಿನ ಮೂಖಾಂತರ ಐಗುಪ್ತಕ್ಕೆ ಹೋದನು. ಮಹಾಯಾಜಕನಾದ ಜಡ್ಡುವ್ವಾ ಯೆರೂಸಲೇಮ ಪಟ್ಟಣದ ಹೊರಗೆ ಒಂದು ಮೆರವಣಿಗೆಯಲ್ಲಿ, ಅಲೆಕ್ಸಾಂಡರನನ್ನು ಸಂದರ್ಶಿಸಿದ ಒಂದು ಕುತೂಹಲ ಭರಿತ ಕಥೆಯನ್ನು ಜೋಸೀಫಸನು ಹೇಳುತ್ತಾನೆ; ಅಸಾಮಾನ್ಯವಾದ[1] ಭಕ್ತಿಭಾವದ ಕಡೆಗೆ ಅಲೆಕ್ಸಾಂಡರನು ಹೇಗೆ ಚಲಿಸಲ್ಪಟ್ಟನು; ಸಾಮಾನ್ಯವಾಗಿ ಕೊಳ್ಳೆ ಹೊಡೆಯುವುದರಿಂದ ಅವನು ಪಟ್ಟಣವನ್ನು ಹೇಗೆ ಉಳಿಸಿದನು; ಹೇಗೆ ಅವನು ದೇವಾಲಯವನ್ನು ಪ್ರವೇಶಿಸಿದನು; ಯೆಹೂದ್ಯರ ದೇವರಿಗೆ ಹೇಗೆ ಆರಾಧನೆ ಅರ್ಪಿಸಿದನು; ಅವನು ಪರ್ಷಿಯನ್ನರನ್ನು ಜಯಿಸಬೇಕೆಂದು ಹೇಳಿದ ಮಹಾ ಯಾಜಕನನ್ನು ನೋಡಿದ, ಮಕೆದೋನ್ಯದಲ್ಲಿಯ ಒಂದು ಕನಸಿನಿಂದ ತನ್ನ ಅಸಾಮಾನ್ಯವಾದ ನಡತೆಗಾಗಿ ತನ್ನ ಅಧಿಕಾರಿಗಳಿಗೆ ಹೇಗೆ ವಿವರಿಸಿದನು ಎಂಬುದರ ಬಗ್ಗೆ ಹೇಳಿದ್ದಾನೆ.[2] ಹೇಗಾದರು, ಅಲೆಕ್ಸಾಂಡರನು ಮತ್ತು ಅವನ ನಂತರ ಬಂದವರು ಯೆಹೂದ್ಯರನ್ನು ವಸಾಹತುದಾರರಂತೆ ಪ್ರಭಾವ ಹೊಂದಿದವರಾಗಿದ್ದರು; ಯಾಕಂದರೆ ಅವರು ನೈಲ್

ನದಿಯ ತೀರದಲ್ಲಿದ್ದ ಯೆಹೂದೀ ವಸಾಹತುಗಾರರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಿ ಕೊಟ್ಟರು ಮತ್ತು ಅಲೆಕ್ಸಾಂಡ್ರಿಯವು ಯೆಹೂದ್ಯರ ವಿಶಾಲ ಜನಸಂಖ್ಯೆಯ ಕೇಂದ್ರವಾಯಿತು ಮತ್ತು ಪ್ರಸಿದ್ಧವಾದ ಯೆಹೂದಿ ಕಲಿಯುವಿಕೆಯ ಸ್ಥಾನವಾಯಿತು.

**3. ಐಗುಪ್ತ್ಯ ಅವಧಿ** (ಕ್ರಿ.ಪೂ. 323-204).-ಅಲೆಕ್ಸಾಂಡರನು ಬಬಿಲೋನಿನಲ್ಲಿ ಕ್ರಿ.ಪೂ. 323ರಲ್ಲಿ ನಿಧನನಾದನು. ಅವನ ಸಾಮ್ರಾಜ್ಯದ ವಿಭಜನೆಯ ಮೇಲೆ ಅವನ ಅಧಿಕಾರಿಗಳ ಮಧ್ಯದಲ್ಲಿಯ ಇಪ್ಪತ್ತು ವರ್ಷಗಳ ಗಲಿಬಿಲಿಯ ಹೋರಾಟದನಂತರ, ಕೆಲವೊಂದು ರೀತಿಯ ಕ್ರಮವು ಬಂದಿತು. ಸೊಲ್ಯೂಕಸನು ಏಶಿಯಾಟಿಕ್ ಪ್ರಾಂತ್ಯಗಳ ವಿಶಾಲಭಾಗವನ್ನು ಪಡೆದುಕೊಂಡನು. ಸೂಸಾ, ಬಬಿಲೋನ ಮತ್ತು ದಮಸ್ಕಸ್‌ದಂಥ ಪೂರ್ವದ ಪುರಾತನ ರಾಜಧಾನಿಗಳನ್ನು ದಾಟಿಹೋಗಿ, ಮೆಡಿಟರೇನಿಯನ್ನದ ಸಮೀಪದಲ್ಲಿ ಓರೋಟೆಸ್‌ದಲ್ಲಿ ಅಂತಿಯೋಕ ಎಂಬ ವೈಭವವುಳ್ಳ ಪಟ್ಟಣವನ್ನು ಸ್ಥಾಪಿಸಿದನು. ಅಂದಿನಿಂದ ಎರಡೂವರೆ ಶತಮಾನಗಳವರೆಗೆ ಸೆಲ್ಯೂಸಿದರು (ಸೆಲ್ಯೂಕಸ್‌ನ ವಂಶಜರು) ಐಶ್ವರ್ಯವಂತ ಸಿರಿಯನ್ ರಾಜ್ಯವನ್ನು ಆಳಿದರು, ಮತ್ತು ಅಲ್ಲಿ ಶತಮಾನಗಳ ವರೆಗೆ ಐಶ್ವರ್ಯವೂ ಏಶಿಯಾ ಸಂಸ್ಕೃತಿಯೂ ಕೇಂದ್ರೀಕರಿಸಿತ್ತು.

ಪ್ಟೋಲೆಮಿಯು ಐಗುಪ್ತನ್ನು ಅದರ ಹೊಸ ರಾಜಧಾನಿ ಅಲೆಕ್ಸಾಡ್ರಿಯದೊಂದಿಗೆ ಗೆದ್ದುಕೊಂಡನು, ಅದು ಬೇಗನೇ ಎಲ್ಲಾ ಪೂರ್ವದಲ್ಲಿ ವ್ಯಾಪಾರದ ಮತ್ತು ಸಾಹಿತ್ಯದ ಮಹಾ ಪಟ್ಟಣವಾಯಿತು. ಈ ಎರಡು ರಾಜ್ಯಗಳು ಮತ್ತು ರಾಜಧಾನಿಗಳು ದೀರ್ಘ ಕಾಲದ ವಿರೋಧಿಗಳಾಗಿದ್ದವು. ಪ್ಟೋಲೆಮಿಯು ಬೇಗನೇ ಸೆಲ್ಯೂಕಸ್‌ನಿಂದ ಪಾಲೆಸ್ತೀನ ವನ್ನು ಕಿತ್ತು ಕೊಂಡಿದ್ದನು. ಪ್ಟೋಲೆಮಿಯರ ಅಧೀನತೆಯಲ್ಲಿ ಶತಮಾನವು, ಮುಖ್ಯವಾಗಿ, ಯೆಹೂದ್ಯರಿಗೆ ಸಮೃದ್ಧಿಯ ಅವಧಿಯಾಗಿತ್ತು. ಅತೀ ಮಹತ್ವದ ಘಟನೆಯ, ಆಲೆಕ್ಸಾಂಡ್ರಿಯದ ದೊಡ್ಡ ಗ್ರಂಥಾಲಯಕ್ಕಾಗಿ ಪ್ಟೋಲೆಮಿ ಫಿಲಡಲ್ಫಸ್‌ನ ಆಜ್ಞೆಯಿಂದ, ಹಿಬ್ರೂ ಪರಿಶುದ್ಧಬರಹಗಳು ಗ್ರೀಕ್ ಭಾಷೆಯಲ್ಲಿ ಭಾಷಂತರಗೊಂಡದ್ದು. ಈ ಕಾರ್ಯವು ಸೆಪ್ಟುವಗಿಂತ ಎಂದು ತಿಳೇಯಲ್ಪಟ್ಟಿದೆ, ಸಾಂಪ್ರಾದಯಿಕ ಭಾಷಾಂತರಕಾರರ ಸಂಖ್ಯೆಯಿಂದ ಇದು ಹೀಗೆ ಕರೆಯಲ್ಪಟ್ಟಿತು.

**4. ಸಿರಿಯನ್ ಅವಧಿ** (ಕ್ರಿ.ಪೂ. 204-167).-ವಿರೋಧಿ ಬಲಗಳ ಮಧ್ಯದಲ್ಲಿ ಪಲೇಸ್ತೀನ ಪುನಃ ಜಗಳದ ಕಾರಣವಾಯಿತು. ಸೆಲ್ಯೂಸಿದವು, ಅಂತಿಮವಾಗಿ ಪ್ಟೋಲೆಮಿಯರಿಂದ ದೇಶವನ್ನು ಪುನಃ ವಶಪಡಸಿಕೊಂಡಿತು. ಸಿರಿಯನ್ ಆಳ್ವಿಕೆಯ ಅವಧಿಯು ಅತೀ ಕತ್ತಲೆಯದಾಗಿದ್ದರೂ ಇಡೀ ನಾಲ್ಕುನೂರು ವರ್ಷಗಳಲ್ಲಿ ಮಹಿಮೆ ಯುಳ್ಳದ್ದಾಗಿತ್ತು, ಸೆಲ್ಯೂಸದರು ನೀತಿಗೆಟ್ಟ ದುಷ್ಟ ಪ್ರಭುಗಳಾಗಿದ್ದರು. ಅಂತಿಯೋಕಸ್ ಎಪಿಫಾನೆಸನು (ಕ್ರಿ.ಪೂ. 175-164) ಅವರಲ್ಲಿ ಎಲ್ಲರಿಗಿಂತ ಹೆಚ್ಚು ಸುಪ್ರಸಿದ್ಧನಾಗಿದ್ದನು. ಒಂದು ಸಂದರ್ಭದಲ್ಲಿ ಐಗುಪ್ತದಲ್ಲಿಯ ಸೋಲಿನಿಂದ ಹಿಂದಿರುಗುತ್ತಿದ್ದಾಗ ಅವನು ತನ್ನ ಪ್ರತೀಕಾರವನ್ನು ಯೆರೂಸಲೇಮಿನ ಮೇಲೆ ತೋರಿಸಿದನು. ಅವನು ನಾಲ್ವತ್ತು ಸಾವಿರ ಜನರನ್ನು ಸಂಹಾರ ಮಾಡಿದನು, ದೇವಾಲಯದ ಸಂಪತ್ತನ್ನು ಸೂರೆ ಮಾಡಿದನು, ಬಲಿಪೀಠದ ಮೇಲೆ ಹೆಣ್ಣು ಹಂದಿಯನ್ನು ಯಜ್ಞವಾಗಿ ಅರ್ಪಿಸುವುದರಿಂದ ಮತ್ತು ಅಶುದ್ಧ ಪಶುವಿನ ಭಾಗವನ್ನು ಬೇಯಿಸಿದ ಮದ್ಯವನ್ನು ದೇವಾಲಯದ ಒಳಭಾಗದಲ್ಲಿ ಸಿಂಪಡಿಸುವುದರಿಂದ ಧಾರ್ಮಿಕ ಭಾವನೆಯನ್ನು ಕೆರಳಿಸಿದನು. ಪ್ರತಿಯೊಂದು ಸಾಧನದಿಂದ ಹಿಬ್ರೂ ಧರ್ಮವನ್ನು ಮತ್ತು ಭಾವನೆಯನ್ನು ಬೇರು ಸಹಿತ ಕಿತ್ತು ಹಾಕಿ ಜನಾಂಗವನ್ನು ಗ್ರೀಕರಾಗಿ ಬದಲಾಯಿಸಲು ಹುಡುಕಿದನು. ದೇವಾಲಯ ವನ್ನು ಮುಚ್ಚಿಸಿದನು ಹಾಗೂ ಮರಣದ ನೋವಿನಿಂದ, ಯೆಹೂದಿ ಧರ್ಮವನ್ನು ಪ್ರತಿಬಂಧಿಸಿದನು. ಸಮೂಹಗಳು ಶೂರತನದಿಂದ ತಮ್ಮ ನಂಬಿಕೆಯನ್ನಲ್ಲ ಆದರೆ

ಪ್ರಾಣಗಳನ್ನು ತ್ಯಾಗಮಾಡಿದರು. ಈ ಶೂರತನದ ವಿರೋಧಿಸುವಿಕೆಯಲ್ಲಿದ್ದ ನಾಯಕರು ಮಕ್ಕಬ್ಬಿಯರು ಎಂದು ತಿಳಿಯಲ್ಪಟ್ಟ ಯಾಜಕ - ದೇಶನಿಷ್ಠರ ಕುಟುಂಬವಾಗಿತ್ತು.

**5. ಮಕ್ಕಬ್ಬಿಯನರ ಅವಧಿ** (ಕ್ರಿ.ಪೂ. 167-63).-ಮತ್ತಾತಿಯಸ್ ಎಂಬ ಹೆಸರಿನ ಮುದುಕ ಯಾಜಕನಿಂದ ಒಂದು ಸ್ವಾತಂತ್ರ್ಯದ ಯುದ್ಧವು ಪ್ರಾರಂಭಿಸಲ್ಪಟ್ಟಿತು ಮತ್ತು ಮೂವತ್ತು ವರ್ಷಗಳವರೆಗೆ ಅವನ ಮಕ್ಕಳಿಂದ ಮುಂದುವರಿಸಲ್ಪಟ್ಟಿತು. ಜೂಡಾಸನು, ಯೆಹೂದೀ ವ್ಯಾಲ್ಲೇಸನು, ಒಂದು ವರ್ಷದಲ್ಲಿ ತನ್ನ ಸ್ವಂತ ಸಂಖ್ಯೆಗಿಂತ ಹತ್ತು ಸಲಕ್ಕೆ ವಿರೋಧವಾಗಿ ಐದು ಯುದ್ಧಗಳನ್ನು ಗೆದ್ದುಕೊಂಡನು, ಮತ್ತು ಕುಟುಂಬಕ್ಕೆ ಹೊಂದಿಕೊಂಡಿದ್ದ "ಮಕ್ಕಬ್ಬೀ" (ಸುತ್ತಿಗೆ) ಎಂಬ ಬಿರುದನ್ನು ಹೊಂದಿಕೊಂಡನು. ಜೂಡಾಸನು ದೇವಾಲಯವನ್ನು ಪುನ ತೆರೆದು, ಶುದ್ಧೀ ಕರಿಸಿ ಮತ್ತು ಪುನಃ ಪ್ರತಿಷ್ಠಿಸುವವರೆಗೆ ಯಶಸ್ವಿಯಾಗಿದ್ದನು. ಅದರ ಗೌರವಕ್ಕಾಗಿ ಪ್ರತಿಷ್ಠೆಯ ಹಬ್ಬದ ಆಚರಣೆಯು ಮುಂದುವರಿಸಲ್ಪಟ್ಟಿತು (ಯೋಹಾನ 10:22). ಜೂಡಾಸನು ಅಂತಿಮವಾಗಿ ಯುದ್ಧದಲ್ಲಿ ಬಿದ್ದು ಹೋದನು; ಆದರೆ ತೊಂದರೆಗೊಳಗಾದ ಸ್ವತಂತ್ರ್ಯವು ಕೊನೆಗೆ ಅವನ ಸಹೋದರ ಸಿಮೋನನಿಂದ ಗೆಲ್ಲಲ್ಪಟ್ಟಿತು ಹಾಗೂ ಸಿರಿಯನ್ನರಿಂದ ಮನ್ನಿಸಲ್ಪಟ್ಟಿತು, ಸಿಮೋನನ ಮಗ ಜಾನ್‌ಹಿರ್ಕಾಸುಸನು ಅರಸನೆಂಬ ಹುದ್ದೆಯೊಂದಿಗೆ ಅವನ ವಾರಸುದಾರನಾದನು. ಹೀಗೆ ಆಸ್ಮೋನಿಯಿನ್ ರಾಜ್ಯವು ಸ್ಥಾಪಿಸಲ್ಪಟ್ಟಿತು.[3] ಮಕ್ಕಬ್ಬಿಯರ ಒಬ್ಬ ಪೂರ್ವಜನಾದ ಆಸ್ಮೋನಿಯನಿಂದ ಈ ಹೆಸರಾಯಿತು.[4]

**6. ರೋಮನ್ ಅವಧಿ** (ಕ್ರಿ.ಪೂ. 63-ಕ್ರಿ.ಶ. 70, ಪೊಂಪೆಯಿಂದ ಯೆರೂಸಲೇಮು ವಶಪಡಿಸಿಕೊಳ್ಳಲ್ಪಟ್ಟಂದಿನಿಂದ ಟೈಟಸನಿಂದ ಅದರ ನಾಶನದವರೆಗೆ). -ಮಕ್ಕಬ್ಬಿಯರ ಅವಧಿಯ ಮುಕ್ತಾಯದ ವರ್ಷಗಳು ತಿರಸ್ಕರಣೀಯವಾದ ನಾಗರಿಕ ಹೋರಾಟಗಳ ವರ್ಷಗಳಾಗಿದ್ದವು. ಆಸ್ಮೋನಿಯನ್ ಕುಟುಂಬದ ಭಿನ್ನವಾದ ಸದಸ್ಯರು ಸಿಂಹಾಸನಕ್ಕಾಗಿ ಪ್ರತಿದ್ವಂದಿಗಳಾಗಿದ್ದರು; ಮತ್ತು ಸಂಚುಗಳು ಹಾಗೂ ಪ್ರತಿ ಸಂಚುಗಳು, ಪರಸ್ಪರ ಕೊಲೆಗಳು ಮತ್ತು ರೋಮ್‌ದ ಏಳುತ್ತಿರುವ ಬಲಕ್ಕೆ ಮನವಿಗಳು ವೃತ್ತಾಂತಗಳಿಗೆ ಕಲೆಯನ್ನು ಹಚ್ಚಿದವು. ಕ್ರಿ.ಪೂ. 63ರಲ್ಲಿ, ದೊಡ್ಡ ಪಂಪೆಯು, ಮಿತ್ರದಾಟಿಕ್ ಯುದ್ಧದ ಮುಕ್ತಾಯದಲ್ಲಿ ತನ್ನ ಜಯಶಾಲಿ ದಂಡುಗಳನ್ನು ಸಿರಿಯಾದೊಳಗೆ ನಡಿಸಿದನು, ಸೆಲ್ಯೂಸಿದಿಯದ ರಾಜ್ಯಕ್ಕೆ ಅಂತ್ಯ ಹಾಕಿದನು, ಮತ್ತು ಯೆರೂಸಲೇಮನ್ನು ವಶಪಡಿಸಿಕೊಳ್ಳುವುದರಿಂದ ಯೆಹೂದ್ಯರಿಗಾಗಿ ಸ್ವತಂತ್ರ ರಾಜ ಕೀಯ ಜೀವನದ ಕೊನೆಯ ಕಿಡಿಗಳನ್ನು ನಂದಿಸಿದನು, ಕೆಲ ಸಮಯದವರೆಗೆ ಆಸ್ಮೋನಿಯನ್ನರು ಸ್ಥಳಿಕ ಆಡಳಿತೆಗಾರರಂತೆ, ಸಿರಿಯದ ರೋಮನ್ ರಾಜ್ಯಪಾಲನ ಅಧೀನತೆಯಲ್ಲಿ, ತಿಬೇರಿಯದಿಂದ ಕೊಡಲ್ಪಟ್ಟ ನಿರಂಕುಶ ಅಧಿಕಾರಕ್ಕೆ ಒಳಗಾಗಿ ಮುಂದುವರಿದರು.

**ಹೆರೋದಿಯನ್ ಕುಟುಂಬ.**-ಆದರೆ ಈಗ ಒಂದು ಹೊಸ ವೈಯಕ್ತಿಕ ಬಲವು ದೃಶ್ಯದ ಮೇಲೆ ಬರುತ್ತದೆ. ಒಂದು ಶತಮಾನದವರೆಗೆ ಹೆರೋದಿಯನ್ ಕುಟುಂಬವು ಯೆಹೂದಿ ಚರಿತ್ರೆಯಲ್ಲಿ ಪ್ರಮುಖ ಪಾತ್ರವಹಿಸಿತು; ಒಂದು ಮಹತ್ವದ ಶತಮಾನ, ಅದು ಯೇಸುಕ್ರಿಸ್ತನ ಜನನ ಮತ್ತು ಸೇವೆಯನ್ನು ಹಾಗೂ ಸಭೆಯ ಸ್ಥಾಪಿಸುವಿಕೆಯನ್ನು ನೋಡಿತು. ಮಹಾ ಹೆರೋದನು (ಕ್ರಿ.ಪೂ. 37-4) ಇದುಮೀನ್ (ಎದೋಮ್ಯ) ವಂಶಜನಾಗಿದ್ದನು. ಕ್ರಿ.ಪೂ. 47ರಲ್ಲಿ ಅವನ ತಂದೆಯು, ಅಂತಿಪಟೆರನು, ಯೂದಾಯದ ರಾಜಪಾಲನಾದನು. ಅದೇ ಸಮಯದಲ್ಲಿ, ಹೆರೋದನು ಗಲಿಲಾಯದ ರಾಜಪಾಲನಾಗಿ ಮಾಡಲ್ಪಟ್ಟನು. ಕ್ರಿ.ಪೂ. 40ರಲ್ಲಿ ರೋಮನ್ ಸೆನೇಟಿನಿಂದ ಯೂದಾಯದ ಅರಸನಾಗಿ ನೇಮಿಸಲ್ಪಟ್ಟನು, ಆದರೆ ಅವನು ತನ್ನ ರಾಜ್ಯವನ್ನು ಗೆದ್ದುಕೊಳ್ಳಬೇಕಾಗಿತ್ತು, ಅದನ್ನು ಅವನು ಕ್ರಿ.ಪೂ. 37ರಲ್ಲಿ ಸಾಧಿಸಿದನು.

ಯೆಹೂದ ಯಾಜಕ ಅರಸ ಹಿರ್ಕಾನುಸನ ಮೊಮ್ಮಗಳು ಮರಿಯಾಮ್ನೆಯನ್ನು ಅವನು ಮದುವೆಯಾದನು, ಹೀಗೆ ಆಸ್ಮೋನಿಯನ್ ವಂಶದೊಂದಿಗೆ ತನ್ನ ಸ್ವಂತ ಹಕ್ಕನ್ನು ಒಂದುಗೂಡಿಸಿದನು; ಹೆರೋದನು ಸಮಾಂತರವಾಗಿದ್ದ ಪ್ರತಿಭೆಯನ್ನು ಸರಕಾರಕ್ಕಾಗಿ ಹೊಂದಿಕೊಂಡಿದ್ದನು. ಆದರೆ ಅವನ ದುಷ್ಕಾರ್ಯಗಳು ಇನ್ನೂ ದೊಡ್ಡವಾ ಗಿದ್ದವು. ಅವನು ಸಾಧನೆಗಳಿಗೆ ವಿವೇಚನೆಯಿಲ್ಲದವನೂ, ಅತಿಯಾದ ಕಾಮುಕನೂ, ಹುಚ್ಚುತನದಿಂದ ಸಂಶಯವುಳ್ಳವನೂ ಆಗಿದ್ದನು; ಮತ್ತು ಅವನ ಮರಣಾಂಕಿತ ಮತ್ಸರದ ಎದುರಿನಲ್ಲಿ ಒಬ್ಬರ ನಂತರ ಒಬ್ಬರು ಬಲಿಯಾದರು: ಅವನ ಅತ್ತೆ, ಅವನ ಸಹೋದರಿಯ ಗಂಡ ಇಬ್ಬರು ಗಂಡುಮಕ್ಕಳು ಮತ್ತು ಅವನ ಸ್ವಂತ ಸುಂದರವಾದ ಮರಿಯಾಮ್ನೆ ಅವನಿಂದ ಕೊಲೆಯಾದರು. ಯೆರೂಸೇಮಿನಲ್ಲಿ ಪಂದ್ಯಾಟಗಳನ್ನೂ ಇತರ ಗ್ರೀಕ್ ಸಾಂಪ್ರದಾಯಗಳನ್ನೂ ಪರಿಚಯಿಸುವುದರಿಂದ ಯೆಹೂದ್ಯರ ದ್ವೇಷವನ್ನು ಕಟ್ಟಿಕೊಂಡನು. ಅವರ ಕಣ್ಣಿನಲ್ಲಿ ಇದಕ್ಕೆ ಪ್ರಾಯಶ್ಚಿತ್ತ ಮಾಡಲು, ಅವನು ದೇವಾಲಯ ವನ್ನು ಪುನಃ ಕಟ್ಟಿಸಿದನು, ಸೊಲೊಮೋನನು ಕಟ್ಟಿಸಿದ್ದಕ್ಕಿಂತ ಅದನ್ನು ಹೆಚ್ಚು ವಿಶಾಲವಾದ ದ್ದನ್ನಾಗಿ ಮಾಡಿದನು. ಮತ್ತು ಜೆರುಬ್ಬಾಬೇಲನು ಮಾಡಿದ್ದಕ್ಕಿಂತ ಹೆಚ್ಚು ಐಶ್ವರ್ಯವುಳ್ಳದ್ದನ್ನಾಗಿ ಮಾಡಿದನು. ಸಮಾರ್ಯದ ಹಳೇ ಪಟ್ಟಣವನ್ನು ಪುನಃ ಕಟ್ಟಿಸಿದನು. ಅದಕ್ಕೆ ಸೆಬಾಸ್ಟೆ ಎಂದು ಹೆಸರಿಟ್ಟನು, ಮತ್ತು ಕೈಸರಯದ ಹೊಸ ಪಟ್ಟಣವನ್ನು ಸ್ಥಾಪಿಸಿದನು ಹಾಗೂ ಅದನ್ನು ಪಾಲೆಸ್ತೀನದ ರಾಜಕೀಯ ರಾಜಧಾನಿಯನ್ನಾಗಿ ಮಾಡಿದನು. "ಅವನ ಸಿಂಹಾಸನವು ಅವನ ಬಂಧುಗಳ ರಕ್ತದಿಂದ ಸ್ನಾನಹೊಂದಿದ್ದರೂ" ದಾವೀದ ಮತ್ತು ಸೊಲೊಮೋನರ ಆಳ್ವಿಕೆಯಲ್ಲಿದ್ದಷ್ಟನ್ನು ಬಿಟ್ಟು, ಅವನು ರಾಜ್ಯಕ್ಕೆ ಅತೀದೊಡ್ಡ ಬಾಹ್ಯ ವೈಭವವನ್ನು ಕೊಟ್ಟನು. ಆದಾಗ್ಯೂ ಅವನ ಈ ಎಲ್ಲಾ ಭೌತಿಕ ವೈಭವವು ಯೆಹೂದ್ಯರನ್ನು ಕುರುಡರನ್ನಾಗಿ ಮಾಡಲಿಲ್ಲ, ತಮ್ಮ ವಂಶಾವಳಿಯಿಂದ ಹಾಗೂ ವೈಭವದ ಹಿಂದಿನ ಕಾಲದಿಂದ ಹೆಮ್ಮೆಯುಳ್ಳವರಾಗಿದ್ದು, ತಾವು ಅಧೀನತೆಯಲ್ಲಿದ್ದ ಜನಾಂಗ ಎಂಬುದನ್ನು ಮರೆತಿರಲಿಲ್ಲ. ಅವರ ಬೇಡಿಗಳಿಗೆ ಹೊಳವು ಕೊಡಬಹುದು; ಆದರೆ ಅವು ಇನ್ನೂ ಬೇಡಿಗಳೇ ಆಗಿರುವವು. ಹೆರೋದನು ಅನ್ಯಕುಲದವನಾಗಿದ್ದನು, ಮತ್ತು ಇನ್ನೊಂದು ಅನ್ಯ ಕುಲದ ಪ್ರತಿನಿಧಿಯಾಗಿ ಆಡಳಿತ ಮಾಡಿದನು. ದಾವೀದನ ಗುಡಾರವು ಬಿದ್ದು ಹೋಗಿತ್ತು, ಮತ್ತು ಜನಾಂಗದ ಆಯಲ್ಪಟ್ಟ ಆತ್ಮಗಳು "ಇಸ್ರಾಯೇಲಿನೊ ಳಗಿನ ಇಸ್ರಾಯೇಲು," ಅದನ್ನು ಪುನಃ ಎಬ್ಬಿಸುವ ಮತ್ತು ಪುರಾತನ ದಿನಗಳಲ್ಲಿದ್ದಂತೆ ಕಟ್ಟು ವಾತನಿಗಾಗಿ ಬಯಸಿದ್ದರು ಮತ್ತು ಎದುರು ನೋಡಿದರು (ಆಮೋಸ 9:11).

## III. ಜೀವನ ಮತ್ತು ಸಂಪ್ರದಾಯಗಳ ಬದಲಾವಣೆಗಳು.

**1. ಉದ್ಯೋಗ.**-ಇಬ್ರಿಯರು ಮೂಲದಲ್ಲಿ ಬೇಸಾಯಗಾರರು ಮತ್ತು ದನಗಾಹಿಗಳು ಆಗಿದ್ದರು. ಸೊಲೊಮೋನನ ದಿನಗಳಲ್ಲಿ, ಮತ್ತು ಅನಂತರದ ಕೆಲವು ಅರಸರ ಅಧೀನತೆಯಲ್ಲಿ, ಅವರು ಕೆಲವೊಂದು ಮಟ್ಟದಲ್ಲಿ ಪರದೇಶದೊಂದಿಗೆ ವ್ಯಾಪಾರ ದಲ್ಲಿದ್ದರು. ಆದರೆ ಸೆರೆಯವಾಸದಿಂದ ಮುಂದೆ ವಿಶಾಲವಾದ ಚದರಿಸುವಿಕೆಯು ಅವರನ್ನು ವ್ಯಾಪಾರಿಗಳ ಜನಾಂಗವಾಗಿ ಮಾಡಿತು, ಈ ವಿಶೇಷ ಗುಣಲಕ್ಷಣವನ್ನು ಅವರು ಎಂದೂ ಕಳೆದುಕೊಳ್ಳಲಿಲ್ಲ.

**2. ಭಾಷೆ.**-ಸೆರೆಯವಾಸದ ಸಮಯದಿಂದ, ಭಾಷೆಯ ಮೇಲೆ ದೊಡ್ಡ ಬದಲಾವಣೆ ಬಂದಿತು. ಕಲ್ದಿಯನ್, ಸಿರಿಯನ್ ಮತ್ತು ಪರ್ಷಿಯನ್ ರೂಪಗಳು ಒಳಸೇರಿದವು, ಮತ್ತು ಶತಮಾನಗಳ ಅವಧಿಯಲ್ಲಿ, ಪರಿಣಾಮವು ಇಟ್ಯಾಲಿಯಲ್ಲಿ ಬಾರ್ಬೇರಿಯನ್ನರ ದಾಳಿಯ ನಂತರ ಆದದ್ದೇ ಆಯಿತು. ಆಧುನಿಕ ಇಟ್ಯಾಲಿಯನ್ ಅದರಲ್ಲಿ ಬೇ

ರೂಲಿದ್ದರೂ ಶಾಸ್ತ್ರೀಯ ಲ್ಯಾಟಿನ್ ಆಗಿರುವುದಿಲ್ಲ. ಹಾಗೆಯೇ, ಶಾಸ್ತ್ರೀಯ ಹಿಬ್ರೂ ಭಾಷೆಯು ಸತ್ತ ಭಾಷೆಯಾಯಿತು ಮತ್ತು ಕ್ರೈಸ್ತಯುಗದ ಪ್ರಾರಂಭದಲ್ಲಿ ಪಾಲೆಸ್ತೀನಿನಲ್ಲಿ ಅರಮಾಯಿಕ್ ಸಮಾನ್ಯ ಭಾಷೆಯಾಯಿತು.

**3. ಧರ್ಮ.**-ಧರ್ಮದಲ್ಲಿ ಬದಲಾವಣೆಗಳು ಹೀಗೆ ಸಂಕ್ಷೇಪಿಸಲ್ಪಡಬಹುದು:

*a. ವಿಗ್ರಹಾರಾಧನೆಯು ಎಂದೆಂದಿಗೂ ಅಳಿದು ಹೋಯಿತು.*-ಸೆರೆಯವಾಸಕ್ಕಿಂತ ಮೊದಲು ತಮ್ಮ ಸುತ್ತಲಿನ ಅನ್ಯರ ಆರಾಧನೆಯನ್ನು ಅನುಕರಿಸುವ ಸತತವಾದ ಪ್ರವೃತ್ತಿಯನ್ನು ಗಮನಿಸಿದ್ದೇವೆ. ಇದು ಕೊನೆಗೆ ಅನ್ಯಜನಾಂಗದ್ದು ಎಂದು ತೋರುವಂಥದ್ದೆಲ್ಲವನ್ನು ತೆಗೆದು ಹಾಕುವ ಭಾವನೆಯನ್ನು ತಂದಿತು.

*b. ಸಭಾಮಂದಿರದ ಉದಯ.*-ಹಳೇ ಒಡಂಬಡಿಕೆಯಲ್ಲಿ ಸಭಾಮಂದಿರದ ಕುರುಹು ಇರುವುದಿಲ್ಲ. ದೇವಾಲಯದ ಆರಾಧನೆಗಳು ಇಲ್ಲದ ಸೆರೆಯವಾಸದ ಸಮಯದಲ್ಲಿ ಇದು ಪ್ರಾರಂಭವಾಗಿರುವ ಸಾಧ್ಯತೆಯಿದೆ. ಒಂದು ಸಭಾಮಂದಿರವನ್ನು ಸ್ಥಾಪಿಸಲು ಹತ್ತು ಜನರು ಸಾಕಾಗಿದ್ದರು. ಯೆರೂಸಲೇಮಿನಲ್ಲಿ ಅಂಥವುಗಳು ನೂರಾರು ಇದ್ದವು, ಮತ್ತು ಸಾಮ್ರಾಜ್ಯದ ದೊಡ್ಡ ಪಟ್ಟಣಗಳಲ್ಲಿ ಅನೇಕವಿದ್ದವು, ಆರಾಧನೆಗಳು ದೈನಂದಿನ ಯಜ್ಞದ ಸಮಯದಲ್ಲಿ ದೈನಂದಿನ ಪ್ರಾರ್ಥನೆಗಳನ್ನು, ಸಬ್ಬತ್ ವಚನಗಳನ್ನು ಮತ್ತು ಪರಿಶುದ್ಧ ವ್ಯಾಖ್ಯಾನಗಳನ್ನು ಒಳಗೊಂಡಿದ್ದವು ಮತ್ತು ಆಶೀರ್ವಾದದೊಂದಿಗೆ ಮುಗಿಸಲ್ಪಡುತ್ತಿದ್ದವು.

*c. ಯೆಹೂದೀ ಒಳಪಂಗಡಗಳ ಉದಯ.*-ಇವು ಪಂಗಡಗಳಾಗಿದ್ದವು (1) ಫರಿಸಾಯರು, ಸಾಂಪ್ರದಾಯದಿಂದ ಕೈವರ್ತಿಸಲ್ಪಟ್ಟ, ಲಿಖಿತ ಧರ್ಮಶಾಸ್ತ್ರದಷ್ಟೇ ಅಧಿಕಾರವಿದ್ದ ಒಂದು ಮೋಶೆಯ ಮೌಖಿಕ ಧರ್ಮಶಾಸ್ತ್ರವನ್ನು ಹಿಡಿದುಕೊಂಡಿದ್ದರು. ಪುನರುತ್ಥಾನ ಮತ್ತು ಭವಿಷ್ಯದ ಜೀವನದ ತತ್ವಗಳನ್ನು ಬಲವಾಗಿ ಹಿಡಿದು ಕೊಂಡಿದ್ದರು. ಅವರು ಕಠಿಣವಾದ ಪ್ರತ್ಯೇಕವಾದಿಗಳಾಗಿದ್ದರು, ಅನ್ಯ ಆಚಾರಗಳನ್ನು ಪರಿಚಯಿಸುವುದಕ್ಕೆ ವಿರೋಧಿಗಳಾಗಿದ್ದರು. ನಿಜವಾಗಿಯೂ ಅವರು ಜನಾಂಗದ ಉತ್ತಮ ಭಾಗವಾಗಿದ್ದರು. ಕಾರ್ಯನಿರತವಾಗಿದ್ದ ಒಡಕನ್ನುಂಟು ಮಾಡುವ ಒತ್ತಡಗಳ ಮಧ್ಯದಲ್ಲಿ ಜನಾಂಗಿಕ ಗುರುತನ್ನು ಕಾಯ್ದುಕೊಂಡು ಬಂದಿತು. (2) ಸದ್ದುಕಾಯರು, ಇವರು ಮೇಲೆ ಹೇಳಿದ ಎಲ್ಲಾ ವಿಷಯಗಳಲ್ಲಿ ಫರಿಸಾಯರನ್ನು ವಿರೋಧಿಸಿದರು. ಮೌಖಿಕ ಶಾಸ್ತ್ರದ ಅಧಿಕಾರವನ್ನು ಅಲ್ಲಗಳೆದರು, ಪುನರುತ್ಥಾನ ಮತ್ತು ಭವಿಷ್ಯದ ಜೀವಿತವನ್ನು ಅಲ್ಲಗಳೆದರು, ಮತ್ತು ತಮ್ಮ ಸುತ್ತಲಿನ ಜನಾಂಗಗಳೊಂದಿಗೆ ಅವರ ಆಚರಣೆ, ವಿಚಾರಗಳೊಂದಿಗೆ ಮುಕ್ತ ವ್ಯವಹಾರವನ್ನು ಮೆಚ್ಚಿಕೊಂಡರು. ರೋಮನ್‌ರೊಂದಿಗೆ ಮೆಚ್ಚಿಕೆಯಿಂದಿರುವುದನ್ನು ಬೆಂಬಲಿಸಿದ ರಾಜಕಾರಣಿಗಳು ಅವರಾಗಿದ್ದರು. ಮಹಾಯಾಜಕನು ಸಮಾನ್ಯವಾಗಿ ಸದ್ದುಕಾಯರ ಪಕ್ಷದವನಾಗಿರುತ್ತಿದ್ದನು. (3) ಎಸ್ಸೀನರು ಸಮಾಜದಿಂದ ಹೊರಗೆ ಇದ್ದ ಸನ್ಯಾಸಿಗಳ ಒಂದು ಚಿಕ್ಕ ಗುಂಪಾಗಿದ್ದರು. ಮದುವೆ ಮಾಡಿಕೊಳ್ಳುತ್ತಿರಲಿಲ್ಲ, ಧ್ಯಾನದಲ್ಲಿ ತಮ್ಮ ಸಮಯ ಕಳೆಯುತ್ತಿದ್ದರು. ಅವರು ಯೆಹೂದಿ ಸನ್ಯಾಸಿಗಳಾಗಿದ್ದರು.

ದೇಶ ಹಾಗಿತ್ತು, ಜನಾಂಗ ಹಾಗಿತ್ತು, ಇದು ಜಗತ್ತಿನ ಅತಿದೊಡ್ಡ ಯುಗದ ಹಿಂದಿನ ಸ್ಥಿತಿಯಾಗಿತ್ತು. ಅಬ್ರಹಾಮಿಕ್ ಒಡಂಬಡಿಕೆಯ ಲೌಕಿಕ ಭಾಗವು ಅದರ ವಿಶಾಲವಾದ ಬೆಳವಣಿಗೆಯನ್ನು ತಲುಪಿ ದಾಟಿಹೋಗಿತ್ತು. ಆತ್ಮಿಕ ಭಾಗವು, ಅಷ್ಟು ಸಮಯದವರೆಗೆ ಛಾಯೆಯಾಗಿತ್ತು, ಅದೆ ಶತಮಾನಗಳು ದಾಟಿ ಹೋದಂತೆ ದೊಡ್ಡ ಪ್ರವಾದಿಗಳಿಂದ ಒತ್ತಿಹೇಳಲ್ಪಟ್ಟಿತು. ಈಗ ಬಹಳಷ್ಟು ನೆರವೇರಿಕೆಯನ್ನು ಕಂಡುಕೊಳ್ಳುತ್ತಿದೆ. ಯೂದಾಯತ್ವದ ಮುಳ್ಳಿನ ಕಾಂಡವು ಪಕ್ವವಾಗಿ, ಯೇಸುಕ್ರಿಸ್ತನ

ಜಾಗತಿಕ ಆತ್ಮಿಕ ಧರ್ಮದಲ್ಲಿ ಅರಳಲು ಸಿದ್ಧವಾಗಿದೆ.

---

ಟಿಪ್ಪಣಿಗಳು

[1]ಡೀನ್ ಅವರು "unwonted" ಎಂದಿದ್ದಾರೆ. [2]ಜೋಸಿಫಸ್ "ಆಂಟಿಕ್ವಿಟೀಜ್," ಪುಸ್ತಕ XI., ಅಧ್ಯಾಯ viii. [3]ಅಥವಾ ಹಾಸ್ಮೋನಿಯನ್. [4]ಅಥವಾ ಹಾಸ್ಮೋನಿಯನ್.

© 2009 Truth for Today